ಓಎಸ್ ನಂ.277/**2019**
**ಪಿಡಬ್ಲ್ಯೂ-2**

ಸಾಕ್ಷಿಯನ್ನು ದಿಃ**31.01.2023.** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**.**

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ**.**ಎಲ್**.**ವಿ**.**ವಿ**.** ವಕೀಲರಿಂದ**.**

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

ನಿಪಿ**-1** ರಲ್ಲಿ ನಾನು ಸಾಕ್ಷಿದಾರಾಗಿ ಸಹಿ ಮಾಡಿದ್ದು ಅದನ್ನು ನಾನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ**-1(**ಬಿ**)** ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನನ್ನ ಜೊತೆಗೆ ರಂಗಪ್ಪ ಎಂಬುವರ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಅವರ ಸಹಿಯನ್ನು ನೋಡಿ ಗುರುತಿಸಿರುತ್ತೇನೆ. ಸದರಿ ದಾಖಲೆಯನ್ನು ರಾಜು, ತಿಮ್ಮೇಗೌಡ ಎಂಬುವರು ಬರೆದುಕೊಟ್ಟಿರುತ್ತಾರೆ. ಅವರ ಸಹಿಯನ್ನು ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ನಿಪಿ**-1(**ಸಿ**)** ಮತ್ತು ನಿಪಿ**-1(**ಡಿ**)** ಎಂದು ಗುರುತಿಸಲಾಗಿದೆ. ಬರೆಸಿಕೊಂಡವರು ಸೌಮ್ಯ ಎಂಬುವರು ಸಹಿ ಮಾಡಿರುತ್ತಾರೆ. ಅದನ್ನು ನೋಡಿದರೆ ಗುರುತಿಸಿರುತ್ತೇನೆ. ಅದನ್ನು ನಿಪಿ**-1(**ಇ**)** ಎಂದು ಗುರುತಿಸಲಾಗಿದೆ. ಗಂಗಾಧರ ಎಂಬುವರು ಸದರಿ ಪತ್ರವನ್ನು ಬರೆದಿರುತ್ತಾರೆ ಅವರ ಸಹಿಯನ್ನು ನೋಡಿ ಗುರುತಿಸಿರುತ್ತೇನೆ.

ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್